ಶ್ರೀ ಬಿ. ಬಸವಲಿಂಗಪ್ಪ:- ನಾನು ಒಪ್ಪುತ್ತೇನೆ. ಈಗ ಎತ್ತರ ಮಾಡಿದ್ದಾರೆ. ಅಲ್ಲಿ ಇನ್ನೂ ಕೆಲಸ ಮಾಡುತ್ತಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಅದನ್ನು ಇನ್ನೂ ಎತ್ತರ ಮಾಡುವುದಾದರೆ ಮತ್ತೆ ಪರೀಕ್ಷೆ ಮಾಡಿ ಸೂಚನೆ ಕೊಡುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ತುಮಕೂರು ಜಿಲ್ಲಾ ಪರಿಷತ್ತಿನಿಂದ ತೆರೆದ ಪಶು ವೈದ್ಯಶಾಲೆಗಳು

೩೫೬(೧೮೩೨) ಶ್ರೀ ಮಾಧು ಸ್ವಾಮಿ (ಚಿಕ್ಕನಾಯಕನ ಹಳ್ಳಿ):- ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ತುಮಕೂರು ಜಿಲ್ಲಾಪರಿಷತ್ ವತಿಯಿಂದ ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ಎರಡು ವರ್ಷಗಳ ಹಿಂದೆ ಆರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅವುಗಳನ್ನು ಮುಂದುವರಿಸಿ, ಸಿಬ್ಬಂದಿ ನೇಮಕ ಮಾಡುವ ಆಲೋಚನೆ ಏನಾದರೂ ಇದೆಯೆ;

ಇ) ಇದ್ದಲ್ಲಿ ಎಂದಿನಿಂದ ಈ ಕೆಲಸ ಆರಂಭ ಮಾಡಬಹುದು?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು):-

ಅ) ಹೌದು, ಆದರೆ ಇವುಗಳಿಗೆ ಸರ್ಕಾರದ ಮಂಜೂರಾತಿ ನೀಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ಮಲಪ್ರಭಾ ಯೋಜನೆಯ ಪುನರ್‌ವಸತಿ ಕೇಂದ್ರಗಳಿಗೆ ಡ್ರಯನೇಜ್ ವ್ಯವಸ್ಥೆ

೩೫೭(೨೧೪೫)ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ವಿಜ್ಞಾನ, ತಂತ್ರಜ್ಞಾನ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಬೆಳಗಾವಿ ಜಿಲ್ಲೆ ಮಲಪ್ರಭಾ ಯೋಜನೆಯಲ್ಲಿ ಮುಡುಗಡೆಯಾದ ಏರಿ ಪುನರ್‌ವಸತಿಗೆ ಹೊಸದಾಗಿ ನಿರ್ಮಿಸಲಾದ ಪುನರ್ ವಸತಿ ಕೇಂದ್ರಗಳಾದ ಬೈಲಹೊಂಗಲ ತಾಲ್ಲೂಕು ದರ್ಬೂರ, ಗುಡದೂರ, ಆರವಳ್ಳಿ, ಚಿಕ್ಕಮುಳಕೂರು ಗ್ರಾಮಗಳಲ್ಲಿ ನೀರಾವರಿ ಇಲಾಖೆ ಇವರು ಅಂಡರ್ ಗ್ರೌಂಡ್ ಡ್ರಾಯನೇಜ್ ಯೋಜನೆಯನ್ನು ಮಾಡದೇ ಇರವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಯೋಜನೆಯನ್ನು ಮಾಡದೇ ಇರುವುದರಿಂದ ಜನರು ರಸ್ತೆಯ ಬದಿಗೆ ಮಲಮೂತ್ರ ವಿಸರ್ಜನೆ ಮಾಡುತ್ತಿದ್ದು ಅಲ್ಲಿಯ ಪರಿಸರ ಕೆಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಪರಿಸರ ಮತ್ತು ಮಾಲಿನ್ಯ ಕಾಯಿದೆ ಪ್ರಕಾರ ಅಂಡರ್ ಗ್ರೌಂಡ್ ಡ್ರೈನೇಜ್‌ನ್ನು